ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಶಾಸಕರು ವ್ಯಕ್ತ ಪಡಿಸಿದ ಅಭಿಪ್ರಾಯಕ್ಕೆ ನನ್ನ ಸಂಪೂರ್ಣವಾದ ಸಹಮತ ಇದೆ. ನರಕ ಸದುಶ್ಯವಾಗಿರತಕ್ಕಂಥ ಸಮೂಹ ಶೌಚಾಲಯಗಳನ್ನು ಮನಗಂಡೇ ಅವುಗಳನ್ನು ಸುಸ್ಥಿತಿಯಲ್ಲಿ ಇಡಲು ಸಾಧ್ಯವಾಗಲಾರದ ಕಾರಣಕ್ಕಾಗಿಯೇ ಕುಟುಂಬ ಶೌಚಾಲಯಗಳು ಇದ್ದರೆ ಅವರು ತಮ್ಮ ಮಟ್ಟಿಗೆ ಚೆನ್ನಾಗಿ ಇಟ್ಟುಕೊಳ್ಳಬಹುದು ಎನ್ನುವ ಕಾರಣಕ್ಕಾಗಿಯೇ ಹಣ ಕೊಡುತ್ತಿದ್ದೇವೆ. ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆನ್ನುವ ಯೋಚನೆಯನ್ನೂ ಸಹ ನಾವು ಮಾಡಿದ್ದೇವೆ.

12.00 ಪಿಎಂ

ಶ್ರೀ ವಾಟಾಳ್ ನಾಗರಾಜ್:- ಈ ಸರ್ಕಾರ ಸರಿಯಿಲ್ಲ.

ಅಧ್ಯಕ್ಷರು:- ಇನ್ನೂ ಹೆಜ್ಜಾಲದ ವಿಷಯ ಇದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಷಯ. ಇದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾಗಿದ್ದರೂ ಮಹಿಳೆಯರಿಗೆ ಶೌಚಾಲಯಗಳನ್ನು ಕಲ್ಪಿಸಿಕೊಡುವುದಕ್ಕಾಗಲಿಲ್ಲ.

ಅಧ್ಯಕ್ಷರು:- ಮಾಡುತ್ತೇವೆಂದು ಹೆಳಿದ್ದಾರಲ್ಲ !

ಶ್ರೀ ವಾಟಾಳ್ ನಾಗರಾಜ್:- ಒಂದು ಮೂಟೆ ಸಿಮೆಂಟ್, ಎರಡು ಕಲ್ಲು ಕೊಟ್ಟು ನೀವೇ ಮಾಡಿಕೊಳ್ಳಿ ಎಂದರೆ ಅದು ಯಾವ ಶೌಚಾಲಯ? ಆ ಶೌಚಾಲಯಕ್ಕೆ ಬೆಂಕಿ ಹಾಕಿತು. ಆ ವ್ಯವಸ್ಥೆ ಸರಿಯಿಲ್ಲ. ಇದು ಅತ್ಯಂತ ನಾಚಿಗೆಗೇಡು. ಮಹಿಳಾ ವರ್ಷ ಎಂದು ಹೇಳುತ್ತಾರೆ, ಮಹಿಳಾ ಕಲ್ಯಾಣ ಎಂದು ಹೇಳುತ್ತಾರೆ. ಇದರ ಬಗ್ಗೆ ನಾನು ವಿರೋಧಿಸಿ ಸಭಾ ತ್ಯಾಗವನ್ನು ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).

ಶ್ರೀ ಜಿ.ವಿ. ಶಿವಕುಮಾರ್:- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತ್ರವೇ ಮಹಿಳೆಯರ ಬಗ್ಗೆ ಕಳಕಳಿ ಇರುವುದು? ಇನ್ನು ಬೇರೆ ಯಾರಿಗೂ ಇಲ್ಲವೇ?

ವಿಷಯ:- ಬೆನಕಟ್ಟಿ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ.

11(200)

ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ಬೆನಕಟ್ಟಿ ಗ್ರಾಮದಲ್ಲಿ ಕುಡಿಯುವ ನೀರಿನ ಬವಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಶಾಶ್ವತ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಯೋಜನೆಯನ್ನು ವ್ಯವಸ್ಥೆ ಮಾಡುವ ಕುರಿತು ಸರ್ಕಾರ ಯೋಜನೆ ರೂಪಿಸಿದೆಯೇ;

3) ಹಾಗಿದ್ದಲ್ಲಿ, ಯಾವಾಗ ಯೋಜನೆಯನ್ನು ಪ್ರಾರಂಭಿಸುವಿರಿ;

4) ಇಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):-

1) ಬಂದಿದೆ.

2) ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಸಂಯುಕ್ತ ಯೋಜನೆಯನ್ನು ರೂಪಿಸುವ ಪ್ರಸ್ತಾವನೆಯು ಪರಿಶೋಧನೆಯಲ್ಲಿದೆ.

3) ಯೋಜನೆಯ ರೂಪರೇಷಗಳು ಅಂತಿಮಗೊಂಡನಂತರ, ಆದ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.

4) ಉದ್ಭವಿಸುವುದಿಲ್ಲ.

ಶ್ರೀ ರಾಜಶೇಖರ ಶೀಲವಂತ:- ಮಾನ್ಯ ಅಧ್ಯಕ್ಷರೇ, ಬೆನಕಟ್ಟಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಒಂದು ಸಂಯುಕ್ತ ಯೋಜನೆ ರೂಪಿಸಲು ಪರಿಶೀಲನೆ ಮಾಡಲಾಗುತ್ತಿದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ, ಈಗಿನ ಸಧ್ಯದ ಪರಿಸ್ಥಿತಿಯಲ್ಲಿ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಅತ್ಯಂತ ಚಿಂತಾಜನಕವಾಗಿದೆ. ಅಂದಾಜು ಎರಡೂವರೆ ಕಿಲೋಮೀಟರ್ ದೂರವಿರುವ ಒಂದು ಬೋರ್ ವೆಲ್‌ನಿಂದ ನೀರನ್ನು ಪಂಪ್ ಮಾಡಿ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ, ದಿನದಲ್ಲಿ ಕೇವಲ 3 ಗಂಟೆಗಳ ಕಾಲ ಮಾತ್ರ ವಿದ್ಯುತ್ ಇರುವುದರಿಂದ ಸರಿಯಾಗಿ ನೀರನ್ನು ಸರಬರಾಜು ಮಾಡಲಾಗುತ್ತಿಲ್ಲ. ಆ ದೃಷ್ಟಿಯಿಂದ ಒಂದು ಸಂಯುಕ್ತ ಯೋಜನೆಯನ್ನು ರೂಪಿಸಲಾಗುತ್ತಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಸಂಯುಕ್ತ ಯೋಜನೆ ಎಂದರೆ ಯಾವುದು? ಅದನ್ನು ಯಾವಾಗ ಮಾಡುತ್ತಾರೆ? ಅದರ ಕಾಲಮಿತಿ ಏನು?

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೆ, ಆ ಗ್ರಾಮದಲ್ಲಿ 4 ಬೋರ್‌ವೆಲ್‌ಗಳಿಗೆ ಕೈ ಪಂಪುಗಳನ್ನು ಅಳವಡಿಸಲಾಗಿದೆ. ಇನ್ನೆರಡು ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಿ ಅಲ್ಲಿ ಲಭ್ಯವಿರುವ ಜಲ ಸಂಪನ್ಮೂಲವನ್ನು ಅನುಸರಿಸಿ ತಲಾವಾರು 20 ಲೀಟರ್‌ಗಳಂತೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನು ಮುಂದಕ್ಕೆ ಎಲ್ಲಾ ಜಲ ಸಂಪನ್ಮೂಲವನ್ನು ಸೇರಿಸಿ ಒಂದು ಕಡೆ ಓವರ್ ಹೆಡ್ ಟ್ಯಾಂಕ್ ಮಾಡಿ ತಲಾವಾರು 40 ಲೀಟರ್ ಆದರೂ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಒಂದು ಸಂಯುಕ್ತ ಯೋಜನೆಯನ್ನು ರೂಪಿಸುತ್ತಿದ್ದೇವೆ. ಆ ಯೋಜನೆ ಕಾರ್ಯ ರೂಪಕ್ಕೆ ಬಂದಾಗ ಮಾನ್ಯ ಸದಸ್ಯರು ಹೇಳಿರತಕ್ಕಂಥ ಊರಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆ.

ಶ್ರೀ ರಾಜಶೇಖರ ಶೀಲವಂತ:- ಅದಕ್ಕೆ ಕಾಲ ಮಿತಿಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್:- 40 ಎಲ್‌ಟಿಸಿಟಿ ಗಿಂತ ಕಡಿಮೆ ಇರತಕ್ಕಂಥ ಗ್ರಾಮಗಳು, ಅಂದರೆ, 20 ಎಲ್‌ಟಿ ಸಿಟಿ ಗಿಂತ ಹೆಚ್ಚು 40 ಎಲ್‌ಟಿಸಿಟಿ ಗಿಂತ ಕಡಿಮೆ ನೀರು ಲಭ್ಯ ಇರುವಂಥ ಸುಮಾರು 21 ಸಾವಿರ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಇವೆ. ಆದ್ಯತೆ ನಿರ್ಣಯ ಮಾಡುವಂಥ ಸಂದರ್ಭದಲ್ಲಿ ಆಯಾ ಜಿಲ್ಲೆಯಲ್ಲಿ ತೀರಾ ಕಷ್ಟದ ಪರಿಸ್ಥಿತಿಯಲ್ಲಿ ಇರತಕ್ಕಂತ ಗ್ರಾಮಗಳಿಗೆ ಆದ್ಯತೆ

ಕೊಡಲಾಗುತ್ತದೆ. ಈ ಯೋಜನೆ ಬಂದಾಗ ಮಾನ್ಯ ಸದಸ್ಯರು ಇದನ್ನು ನನ್ನ ಗಮನಕ್ಕೆ ತಂದರೆ 1997-98ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಿಕ್ಕೆ ನಾನು ಶಿಫಾರಸ್ಸು ಮಾಡುತ್ತೇನೆ.

ವಿಷಯ:- ತುಮಕೂರು ಜಿಲ್ಲೆಯಲ್ಲಿನ ಅನುದಾನರಹಿತ ಕನ್ನಡ ಮಾಧ್ಯಮದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು.

12(322)

ಶ್ರೀ ಆರ್. ನಾರಾಯಣ (ಬೆಳ್ಳಾವಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತುಮಕೂರು ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅವುಗಳಲ್ಲಿ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇನ್ನಿತರ ವರ್ಗಗಳಿಂದ ನಡೆಸಲ್ಪಡುತ್ತಿವೆ;

ಇ) ಗ್ರಾಮಾಂತರ ಪ್ರದೇಶಗಳಲ್ಲಿರುವ ಇಂತಹ ಸಂಸ್ಥೆಗಳಿಗೆ ವಿಶೇಷ ನಿಯಮಾವಳಿಯಡಿಯಲ್ಲಿ ಅನುದಾನ ನೀಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಕೆಲವು ಶಾಲೆಗಳು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿವೆ.

ಆ)

	ಪ.ಜಾ. ಪ.ಪಂ.	ಇತರೆ	ಒಟ್ಟು
ಪ್ರಾಥಮಿಕ	011	58	069
ಪ್ರೌಢ	116	49	165

ಇ) ಶಾಶ್ವತ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ನಾರಾಯಣ:- ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ, ಎಸ್‌ಸಿ/ಎಸ್‌ಟಿ ಮತ್ತಿರ ಮ್ಯಾನೇಜ್‌ಮೆಂಟ್‌ನಲ್ಲಿ ಸುಮಾರು 80 ಪರ್‌ಸೆಂಟ್‌ನಷ್ಟು ಪ್ರೌಢ ಶಾಲೆಗಳು ನಡೆಯುತ್ತಿವೆ. ಶಾಶ್ವತ ಅನುದಾನ ರಹಿತ ಎನ್ನುವ ಕಂಡೀಷನ್ ಮೇಲೆ ಅವರುಗಳು ಪ್ರೌಢ ಶಾಲೆಗಳನ್ನು ನಡೆಸುವುದಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟಿದೆ. ಬಹುಶಃ ಮುಂದಿನ ವರ್ಷಗಳಲ್ಲಿ ಅನುದಾನ ಸಿಗಬಹುದೆಂಬ ಹಿನ್ನೆಲೆಯಲ್ಲಿ ಅವರು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರಲ್ಲೂ ಎಸ್‌ಸಿ/ಎಸ್‌ಟಿ ಮ್ಯಾನೇಜ್‌ಮೆಂಟ್‌ನವರು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಡವನ್ನು ಬಾಡಿಗೆ ಪಡೆದು ಶಾಲೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳು ಅವರ ಜೀವನ ಪರ್ಯಂತ ಸಂಬಳ ಇಲ್ಲದೆ ಮಕ್ಕಳಿಗೆ ಪಾಠ ಮಾಡುವುದನ್ನು ಸರ್ಕಾರ ನಿರೀಕ್ಷಣೆ ಮಾಡುವುದು ಸರಿಯೇ? ಎಸ್‌ಸಿ/ಎಸ್‌ಟಿ ಮತ್ತು ಇತರೆ ಮ್ಯಾನೇಜ್‌ಮೆಂಟ್‌ನವರು ಅನುದಾನ